SRI M.M. SAJJAN.—Does the Government know that if four crores of rupees are spent for the execution of Alamattilift Irrigation scheme, 50,000 acres will be irrigated in the area ?

SRI SUBHASH ASTHUR.—Yes.

* *Electrification of Jayanagar Market, Complex.*

487. SRI H.G. CHANNAPPA (Magadi).—Will the Minister for Law and Municipal Administration be pleased to state.—

(*a*) when the tenders were called for installing electric lights to the Jayanager Market Complex under construction by the Bangalore City Corporation ;

(*b*) whether it is not a fact that acceptence of the tenders was delayed by two years and the tender amount was increased by 8 lakhs;

(*c*) whether it is not a fact that the Corporation accepted an individual tenderer instead of a reputed firm ;

(*d*) the action the Government intend taking against the persons responsible for the delay and consequential loss ;

(*e*) whether the Government intend to appoint a committe to probe into the matter ?

SRI D.K. NAIKAR (Minister for Law and Municipal Administration)

(*a*) 22-2-1973.

(*b*) No. The tenders for the electrical installaion works for the construction of Jayanagar Shopping Complex were called for the first time on 22-2-1973. The tenders were called for the second time on 2-4-1974. The acceptance of tender was delayed for one year and two months. The tender amount increased by Rs. 7.40 lakhs.

(*c*) No. The Corporation has not accepted the tender of an individual but accepted the tenders of a reputed firm M/s Sheshadri and Co.

(*d*) Does not arise in view of reply to clause (*b*)

(*e*) No.

ಶ್ರೀ ಎಚ್. ಜಿ. ಚನ್ನಪ್ಪ.—ಈ ಟೆಂಡರನ್ನು ಅಂಗೀಕರಿಸಲು ೧ ವರ್ಷ ೨ ತಿಂಗಳು ನಿಧಾನವಾಗಿದೆ ಎಂದು ಹೇಳಿದ್ದೀರಿ. ಈ ರೀತಿ ನಿಧಾನವಾದುದರಿಂದ ೭ ಲಕ್ಷ ರೂಪಾಯಿ ಜಾಸ್ತಿ ಕೊಡಬೇಕಾಯಿತು. ಈ ರೀತಿ ನಿಧಾನ ಮಾಡಿದ್ದರಿಂದ ಕಾರ್ಪೊರೇಷನ್‌ಗೆ ನಷ್ಟ ಅಲ್ಲವೇ?

†ಶ್ರೀ ಡಿ. ಕೆ. ನಾಯ್ಕರ್.—ಎಲೆಕ್ಟ್ರಿಸಿಟಿ ಎಕ್ವಿಪ್‌ಮೆಂಟ್ಸ್ ಬೆಲೆ ಹೆಚ್ಚು ಆದಹಾಗೆ ಇದು ರಿವೈಸ್ ಆಗುತ್ತಾ ಹೋಗುತ್ತದೆ.

ಶ್ರೀ ಎಚ್. ಜಿ. ಚನ್ನಪ್ಪ.—ಒಂದು ವರ್ಷದ ಹಿಂದೆಯೇ ಅಕ್ಸೆಪ್ಟ್ ಮಾಡಿಕೊಂಡಿದ್ದರೆ ೭ ಲಕ್ಷ ರೂಪಾಯಿ ಉಳಿಯುತ್ತಿತ್ತು ಅಲ್ಲವೇ?

ಶ್ರೀ ಡಿ. ಕೆ. ನಾಯ್ಕರ್.—ಅಕ್ಸೆಪ್ಟ್ ಮಾಡಬೇಕಾದರೆ ಕೆಲವೊಂದು ಪ್ರೊಸೀಜರ್ ಇರುತ್ತದೆ. ಅದರ ಪ್ರಕಾರ ಕರೆಸ್ಪಾಂಡೆನ್ಸ್, ಕ್ಲಾರಿಫಿಕೇಷನ್ಸ್ ಎಲ್ಲಾ ಮಾಡಬೇಕಾದರೆ ವಿಳಂಬವಾಗುತ್ತದೆ. ಈ ರೀತಿ ವಿಳಂಬವಾಗುವುದು ಅನೇಕ ಸಾರಿ ಸಹಜ,

ಶ್ರೀ ಸಿ. ಬೈರೇಗೌಡ.—ಟೆಂಡರು ನೋಟಿಫಿಕೇಷನ್‌ನಲ್ಲಿ ಏನು ನಿಬಂಧನೆಗಳಿವೆ, ಆ ನಿಬಂಧನೆಗಳನ್ನು ಅನುಸರಿಸಿದ್ದಿರಾ ಸ್ವಾಮಿ?

ಶ್ರೀ ಡಿ. ಕೆ. ನಾಯ್ಕರ್,—ಆ ಮಾಹಿತಿ ನನ್ನ ಹತ್ತಿರ ಇಲ್ಲ, ನೋಟೀಸ್ ಬೇಕು,

ಶ್ರೀ ಟಿ. ಎಂ. ಮಂಜುನಾಥ್.—ಯಾವುದಾದರೂ ಒಂದು ಟೆಂಡರ್ ಕರೆಯಬೇಕಾದರೆ, ಪೂರ್ವ ಭಾವಿಯಾಗಿ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಟೆಂಡರನ್ನು ಕರೆಯುತ್ತೀರಿ. ಈ ರೀತಿ ಟೆಂಡರು ಕರೆದ ಮೇಲೆ ಒಂದು ವರ್ಷ ವಿಳಂಬವಾಗುವುದಕ್ಕೆ ಕಾರಣ ಏನು? ಇದಕ್ಕೆ ಅಧಿಕಾರಿಗಳು ಕಾರಣಕರ್ತರಾಗಿದಾರೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಡಿ. ಕೆ. ನಾಯ್ಕರ್.—ನಾನು ಆಗಲೇ ಹೇಳಿದೆ, ಕೆಲವೊಂದು ಟೆಂಡರ್ ಕರೆದ ನಂತರ ಅಕ್ಸೆಪ್ಟೆನ್ಸ್ ವ್ಯಾಲಿಡೇಟ್ ಮಾಡುವಾಗ ಅವರಿಂದ ಕ್ಲಾರಿಫಿಕೇಷನ್ಸ್ ಕರೆಯಬೇಕಾದರೆ ವಿಳಂಬವಾಗುತ್ತದೆ, ಮತ್ತು ಅವರು ಸಪ್ಲೈ ಮಾಡುವುದರೊಳಗೆ ತಡಮಾಡಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ರೀತಿ ಕೆಲಸ ಅನಾವಶ್ಯಕವಾಗಿ ವಿಳಂಬವಾಗಿರುವುದರಿಂದ ಕಾರ್ಪೊರೇಷನ್‌ಗೆ ಲಕ್ಷಾಂತರ ರೂಪಾಯಿ ನಷ್ಟ ಆಗಿರುತ್ತದೆ. ಈ ರೀತಿ ಆಗುವುದಕ್ಕೆ ಕಾರಣರಾದ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಡಿ. ಕೆ. ನಾಯ್ಕರ್.—ಕೆಲವೊಂದು ಸಂದರ್ಭದಲ್ಲಿ ನಿಶ್ಚಿತವಾಗಿ ಇರಬಾರದ್ದರಿಂದಲೇ ಆಯಿತೆಂದು ಕಂಡುಬಂದರೆ ಮಾತ್ರ ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ ಇಂತಹ ಸಾಮೂಹಿಕವಾದ ಕರೆಸ್ಪಾಂಡೆನ್ಸ್‌ನಲ್ಲಿ ಕ್ರಮ ತೆಗೆದುಕೊಳ್ಳುವಂಥ ಆವಶ್ಯಕತೆ ಕಂಡುಬರುವುದಿಲ್ಲ.

ಶ್ರೀ ಎಚ್. ಜಿ. ಚನ್ನಪ್ಪ.—ಟೆಂಡರು ಎಷ್ಟು ಇರುವುದನ್ನು ಆಕ್ಸೆಪ್ ಮಾಡಿದ್ದೀರಿ

ಶ್ರೀ ಡಿ. ಕೆ ನಾಯ್ಕರ್, —ಲೋಯಸ್ಟ್ ಇದ್ದುದ್ದನ್ನು ಆಕ್ಸೆಪ್ಟ್ ಮಾಡಿದೆ,

**Sugar Factory in South Kanara District*

518 Sri JAYAPRAKASH SHETTY (Brahmavar)—

Will the Minister for Industries and Parlimentary Affairs be pleased to state,—

(a) whether there is any proposal for establishing a Sugar Factory in South Kanara District:

(*b*) if so, when it would be established,

(*c*) the location of the proposed factory?

SRI S. M. KRISHNA (Minister for Industries and Parlimentary Affairs).—

(a) Yes,